## ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್

## ಸಿ.ಸಿ ನಂ.960/2021

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಸಹದೇವಪ್ಪ ಫಕ್ಕೀರಪ್ಪ ಹುಬ್ಬಳ್ಳೇರ | ಪಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : | ಫಕ್ಕೀರಪ್ಪ | ಸಿಡಬ್ಲ್ಯೂ | 1 |
| ವಯಸ್ಸು | : | 57 ವರ್ಷ | | |
| ಉದ್ಯೋಗ | : | ಕೂಲಿ ಕೆಲಸ | | |
| ವಾಸ ಸ್ಥಳ | : | ಶಿದ್ದಿಹಳ್ಳಿ, ತಾಃ ಸೊರಬ ಜಿಃ ಶಿವಮೊಗ್ಗ | | |

**ದಿನಾಂಕ:28-11-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಮೃತ ಮಹದೇವಪ್ಪ ನನ್ನ ಅಣ್ಣ. 1 ನೇ ಆರೋಪಿ ನನ್ನ ಅಣ್ಣನ ಮಗ. ದಿಃ26-05-2018 ರಂದು ರಾತ್ರಿ 8.40 ಗಂಟೆ ಸಮಯದಲ್ಲಿ ಆರೋಪಿ ಮತ್ತು ಮೃತ ಮಹದೇವಪ್ಪನು ಆರೋಪಿಗೆ ಸೇರಿದ ಹೊಂಡಾ ಕಂಪನಿಯ ಬೈಕ ಮೂಲಕ ಸಿದ್ದಿಹಳ್ಳಿಯಿಂದ ಅಂದಲಗಿ ಗ್ರಾಮಕ್ಕೆ ಹೋಗುತ್ತಿದ್ದರು, ಆ ಸಂದರ್ಭದಲ್ಲಿ ಆ ಬೈಕ ಅನ್ನು ಆರೋಪಿಯೇ ಚಲಾಯಿಸುತ್ತಿದ್ದನು. ಆತನ ಬೈಕ್ ನ ಹಿಂಬದಿ ಸವಾರನಾಗಿ ಮೃತ ಮಹಾದೇವಪ್ಪ ಹೋಗುತ್ತಿದ್ದರು. ಅದೇ ರೀತಿ ರಾತ್ರಿ 8.40 ಗಂಟೆ ಸಮಯಕ್ಕೆ ಆರೋಪಿ ನನಗೆ ಪೋನ್ ಮಾಡಿ ಗೊಂದಿ ಶಿವಮೊಗ್ಗ ರಸ್ತೆಯ ಶೇಕಪ್ಪ ಕೋಳಿ ಪಾರ್ಮ್ ನ ಹತ್ತಿರ ಯಾರೋ ರಸ್ತೆಗೆ ಗೋವಿನ ಜೋಳದ ಗುಡ್ಡೆ ಹಾಕಿದ್ದು, ಆ ಗುಡ್ಡೆಗೆ ಬೈಕ ಅನ್ನು ಡಿಕ್ಕಿಪಡಿಸಿ ಅಪಘಾತವಾಗಿರುತ್ತದೆ ಎಂದು ತಿಳಿಸಿದರು. ಆ ನಂತರ ನಾನು ಮತ್ತು ನನ್ನ ಸಂಬಂಧಿಕರು ಆ ಸ್ಥಳಕ್ಕೆ ಹೋದೆವು. ಇದರಿಂದ ಆರೋಪಿಯ ಎರಡು ಮೊಣಕಾಲಿಗೂ ಸಹ ಪೆಟ್ಟಾಗಿತ್ತು. ಅಲ್ಲದೇ ಮಹಾದೇವಪ್ಪನಿಗೂ ಸಹ ತಲೆಯ ಮುಂಭಾಗಕ್ಕೆ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದನು. ಆ ನಂತರ ಆ ಮೃತ ಮಹಾದೇವಪ್ಪನ ಆಡೂರು ಆಸ್ಪತ್ರೆಗೆ ತೆಗೆದುಕೊಂಡು ಹೋದೆವು. ಈ ಬಗ್ಗೆ ದಿಃ 27-05-2018 ರಂದು ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ಅದು ನಿಪಿ 1 ಎಂದು, ಸದರಿಯವರ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನಾನು ನೀಡಿದ ದೂರಿಗೆ ಸಂಬಂದಪಟ್ಟಂತೆ

ದಿಃ28-05-2018 ರಂದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.00 ಗಂಟೆಯವರೆಗೆ ಸ್ಥಳ ಪಂಚನಾಮೆ ಮಾಡಿದರು. ಆ ಸ್ಥಳ ಪಂಚನಾಮೆಯನ್ನು ನಿಪಿ 2 ಎಂದು ಗುರುತಿಸಲಾಯಿತು. ಸದರಿಯವರ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಆ ಸ್ಥಳದ ಪೋಟೋವನ್ನು ಸಹ ತೆಗೆಯಲಾಯಿತು. ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ಈಗ ತೋರುತ್ತಿರುವ ಮಾಲು ಜಪ್ತು ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ, ಅದು ನಿಪಿ.4 ಎಂದು, ಸದರಿಯವರ ಸಹಿಯನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೊಲೀಸರು ನನ್ನ ಹಾಗು ಚಾಸಾ-2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ಯಿದ 11.00 ಗಂಟೆಯವರೆಗೆ ಅಪಘಾತಪಡಿಸಿದ ಮೋಟಾರ ಸೈಕಲ ಅನ್ನು ಜಪ್ತು ಮಾಡಿದರು. ಆ ಸಂದರ್ಭದಲ್ಲಿ 5 ಪೊಟೋಗಳನ್ನು ಸಹ ತೆಗೆದರು. ಆ ಪೋಟೋಗಳನ್ನು ನಿಪಿ 5 ರಿಂದ ನಿಪಿ 9 ಎಂದು ಗುರುತಿಸಲಾಯಿತು. ಆ ದಿನ ಆರೋಪಿ ಆ ಮೋಟಾರ್ ಸೈಕಲ ನಿಧಾನವಾಗಿಯೇ ಚಲಾಯಿಸುತ್ತಿದ್ದರು ಎಂದು ತಿಳಿಸಿದರು.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ಆ ದಿನ ಆರೋಪಿ ತನಗೆ ಸೇರಿದ ಬೈಕ ನಂಬರ ಕೆಎ-15 ಡಬ್ಲ್ಯೂ-9140 ರ ಬೈಕ್ ಅನ್ನು ಚಲಾಯಿಸುತ್ತಿದ್ದನು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿ ಆ ಬೈಕ್ ಅನ್ನು ಅತಿ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಲಾಯಿಸಿ ರಸ್ತೆಯಿಂದ ಗೋವಿನ ಜೋಳದ ರಾಶಿಗೆ ಡಿಕ್ಕಿಪಡಿಸಿ ಹಿಂಬದಿ ಕುಳಿತಿದ್ದ ಮಹಾದೇವಪ್ಪನು ಮೃತಪಡಲು ಕಾರಣಕರ್ತರಾಗಿದ್ದರು ಎಂದರೆ ಸರಿ. ಆ ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಬರೆದರು ಎಂದರೆ ಸರಿ. ಆ ಸಂದರ್ಭದಲ್ಲಿ ಪೊಲೀಸರು ಆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಿದರು ಎಂದರೆ ಸರಿ. ಅದೇ ದಿನ ಪೊಲೀಸರು ಅಪಘಾತಪಡಿಸಿದ ಮೋಟಾರ ಸೈಕಲ್ ಅನ್ನು ತಿಳವಳ್ಳಿ ಹೊರ ಪೊಲೀಸ ಠಾಣೆಯಲ್ಲಿ ಮಧ್ಯಾಹ್ನ 12.00 ರಿಂದ 12.30 ರ ವರೆಗೆ ಬರೆದರು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಗೆ ಚಾಲನಾ ಪರವಾನಿಗೆ ಮತ್ತು ಆತನ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ರೂ.500/- ಖರ್ಚು ಸಹಿತ ಪಾಟೀ ಸವಾಲು ಮಾಡಲು ಕಾಲಾವಕಾಶವನ್ನು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್